ಪರ್ಯಟನೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಮತ್ತು ದೇಶದ ನಾರಿಶಕ್ತಿಯನ್ನು ಜಗತ್ತಿಗೆ ತೋರಿಸುವುದು. ಆರು ವರ್ಷಗಳ ಹಿಂದೆ ಐವರು ಮಹಿಳೆಯರ ತಂಡದ ನೇತೃತ್ವ ವಹಿಸಿದ್ದ ವಿಂಗ್ ಕಮಾಂಡರ್ ವರ್ತಿಕಾ ಜೋಶಿ 'ತಾರಿಣಿ'ಯಲ್ಲಿ ಪಯಣಿಸಿ ಇಡೀ ವಿಶ್ವವನ್ನು ಯಶಸ್ವಿಯಾಗಿ ಸುತ್ತಿ ಬಂದಿದ್ದರು. ಲೆಫ್ಟಿನೆಂಟ್ ಕಮಾಂಡರ್ ಪ್ರತಿಭಾ ಜಂವಾಲ್, ಲೆಫ್ಟಿನೆಂಟ್ ಕಮಾಂಡರ್ ಪಿ. ಸ್ವಾತಿ, ಲೆಫ್ಟಿನೆಂಟ್ ಪಾಯಲ್ ಗುಪ್ತ, ಲೆಫ್ಟಿನೆಂಟ್ ಐಶ್ವರ್ಯ ಬೊಡ್ಡಪತಿ ಹಾಗೂ ಲೆಫ್ಟಿನೆಂಟ್ ಎಸ್. ವಿಜಯ ದೇವಿ ಅವರು ವರ್ತಿಕಾ ಅವರ ತಂಡದಲ್ಲಿದ್ದರು.

## ನೌಕೆಗಳ ರಾಣಿ 'ತಾರಿಣಿ'

ಐಎನ್ಎಸ್‌ವಿ ಎಂದರೆ 'ಇಂಡಿಯನ್ ನೇವಲ್ ಸೇಲಿಂಗ್ ವೆಸಲ್' (**Indian Naval Sailing Vessel**). ಅದರ ಹೆಸರು 'ತಾರಿಣಿ'. ಮರದ ಹಲಗೆ ಮತ್ತು ಫೈಬರ್ ಗ್ಲಾಸ್ ಎರಡನ್ನೂ ಬಳಸಿ ನಿರ್ಮಿಸಲಾಗಿರುವ 'ತಾರಿಣಿ' ಹಾಯಿದೋಣಿಯು 17 ಮೀಟರ್ ಉದ್ದ ಹಾಗೂ 5 ಮೀಟರ್ ಅಗಲ ಇದೆ. ಮಹಿಳಾ ನಾವಿಕರಿಗೆ ಬೇಕಾದ ಎಲ್ಲಾ ಅನುಕೂಲಗಳನ್ನು ಒಳಗೊಂಡಿದೆ.

ಒಡಿಶಾ ರಾಜ್ಯದ ಗಂಜಾಂ ಜಿಲ್ಲೆಯಲ್ಲಿರುವ ಬೆಟ್ಟದ ಮೇಲಿನ ದೇವತೆ ತಾರಾ–ತಾರಿಣಿಯ ಹೆಸರನ್ನೇ ಹಾಯಿದೋಣಿಗೆ ಇಡಲಾಗಿದೆ. ರಾಜ್ಯದ ನಾವಿಕರು ಮತ್ತು ವ್ಯಾಪಾರಿಗಳು ಸಮುದ್ರ ಪ್ರಯಾಣ ಮಾಡುವಾಗ ತಾರಿಣಿ ದೇವಿ ಇರುವ ಬೆಟ್ಟಕ್ಕೆ ಪೂಜೆ ಸಲ್ಲಿಸಿಯೇ ತಮ್ಮ ದೋಣಿಯನ್ನು ಸಮುದ್ರದ ನೀರಿಗೆ ಇಳಿಸುವುದು. ಆಗ ಮಾತ್ರ ದೈವದ ಅಭಯ ಇರುತ್ತದೆ ಎನ್ನುವುದು ಅವರ ನಂಬಿಕೆ. ಸಂಸ್ಕೃತ ಭಾಷೆಯಲ್ಲಿ 'ತಾರಿಣಿ' ಎಂದರೆ ದೋಣಿ ಮತ್ತು ರಕ್ಷಕ ಎಂಬ ಅರ್ಥಗಳಿವೆ.

'ತಾರಿಣಿ'ಯನ್ನು ಗೋವಾದ ಅಕ್ವೇರಿಯಸ್ ಫೈಬರ್ ಗ್ಲಾಸ್ ಶಿಪ್ ಯಾರ್ಡ್ ಕಂಪನಿ ನಿರ್ಮಿಸಿದೆ. 2013ರಲ್ಲಿ ಸಾಗರ ಪರಿಕ್ರಮ ಯೋಜನೆಗೆ ಬಳಸಲಾದ 'ಮಾಧೇ' ನೌಕೆಯನ್ನೂ ಇದೇ ಕಂಪನಿಯು ನಿರ್ಮಿಸಿತ್ತು. 'ಮಾಧೇ' ಈಗಾಗಲೇ 1,15,000 ಸಾಗರ ಮೈಲಿಗಳ ಪಯಣ ಮಾಡಿದೆ, ಇನ್ನೂ ಸುಸ್ಥಿತಿಯಲ್ಲಿದೆ. 'ಮೇಕ್ ಇನ್ ಇಂಡಿಯ' ಯೋಜನೆಯ ಅಡಿಯಲ್ಲಿ ತಯಾರಾಗಿರುವ 'ತಾರಿಣಿ'ಯು ಸಾಗರ ಪಯಣದ ಎಲ್ಲಾ ಸವಾಲುಗಳನ್ನು ಎದುರಿಸಿ ನಿಲ್ಲುವ ಶಕ್ತಿ ಪಡೆದಿದೆ.

## ಹರಿದು ಬಂದ ಪ್ರೋತ್ಸಾಹ

ಸಾಗರಯಾನದ ಸಾಧನೆಯನ್ನು ಇದುವರೆಗೂ ಭಾರತದ ಯಾವ ಮಹಿಳೆಯೂ ಮಾಡಿರಲಿಲ್ಲ. ತರಬೇತಿ ಪಡೆದ ಮಹಿಳೆಯರೇ ನೇತೃತ್ವ ವಹಿಸಿ ಯಶಸ್ವಿಯಾಗಿ ಪೂರೈಸಿದ ಸಾಗರಯಾನದ ಖುಷಿಯನ್ನು ಹಂಚಿಕೊಳ್ಳಲು ಏರ್ಪಡಿಸಲಾದ ಸಂತೋಷಕೂಟದಲ್ಲಿ ಮೊರಿಶಿಯಸ್‌ನ ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳು ಭಾಗಿಯಾಗಿ, ಈ ಸಾಧನೆ ಭಾರತ ನೌಕಾಸೇನೆಯ ಇತಿಹಾಸದಲ್ಲಿಯೇ ಮೊದಲು ಎಂಬುದನ್ನು ಸ್ಪಷ್ಟಪಡಿಸಿದರು. ನೌಕಾಸೇನೆಗಳ ಸೌಹಾರ್ದತೆಗೆ ಸಂಬಂಧಿಸಿದಂತೆ ಕೆಲವು ಮಾತುಕತೆ, ತರಬೇತಿಗಳು ನಡೆದವು. ಮೊರಿಶಿಯಸ್‌ನ ಕರಾವಳಿ ಪಡೆಯ ಯೋಧರು, ಅಧಿಕಾರಿಗಳು 'ತಾರಿಣಿ' ನೌಕೆಯನ್ನೇರಿ ಹಲವು ಬಗೆಯ ಕವಾಯತು ಮಾಡಿ ತೋರಿಸಿದರು. ಯುದ್ಧ, ಚಂಡಮಾರುತ, ಬಿರುಗಾಳಿ, ಸುನಾಮಿಗಳ ಎದುರು ಹೇಗೆ ಸೆಣಸಬೇಕು ಮತ್ತು ಜೀವ ರಕ್ಷಿಸಿಕೊಳ್ಳಬೇಕು ಎಂಬುದರ ಅಣಕು ಚಟುವಟಿಕೆಗಳು ನಡೆದವು.

ಇದೇ ವರ್ಷದ ಸೆಪ್ಟೆಂಬರ್‌ನಲ್ಲಿ ಪ್ರಾರಂಭವಾಗುವ 'ಸಾಗರ ಪರಿಕ್ರಮ–4' ವಿಶ್ವ ಪರ್ಯಟನೆಗೆ ಸಿದ್ಧಗೊಳ್ಳಲು ನಡೆಸಿದ ಪೂರ್ವಭಾವಿ ಪರೀಕ್ಷೆ ಮತ್ತು ತಯಾರಿ ಇದಾಗಿತ್ತು. ಪರೀಕ್ಷೆ ಎದುರಿಸಿದ ರೂಪ ಮತ್ತು ಡಿಲ್ನ ಸಾಗರ ಪರಿಕ್ರಮ ನಾಲ್ಕರಲ್ಲಿ ಭಾಗವಹಿಸಲು ಅರ್ಹತೆ ಪಡೆದಿದ್ದಾರೆ. ಇಬ್ಬರಲ್ಲಿ ಒಬ್ಬರಿಗೆ ಮಾತ್ರ ಅವಕಾಶವಿದೆ. ಇವರು ಪಯಣಿಸಿದ ದೂರ 5,000 ಸಾಗರ ಮೈಲಿ (ನಾಟಿಕಲ್ ಮೈಲು)ಗಳಷ್ಟಿತ್ತು. ಒಂದು ಸಾಗರ ಮೈಲಿಯ ದೂರ 1.876 ಕಿಲೋಮೀಟರ್‌ಗೆ ಸಮ. ಮಾಂಡೋವಿ ದೋಣಿ ಕೇಂದ್ರದಿಂದ ಹೊರಟ



ರೂಪ ಅಳಗಿರಿ ಸ್ವಾಮಿ

ನೌಕೆಯು ಮೊದಲ ಹಂತದಲ್ಲಿ 2700 ಸಾಗರ ಮೈಲಿಗಳನ್ನು ಬಿಡುವಿಲ್ಲದೆ ಕ್ರಮಿಸಿತ್ತು. ಯಾನದ ಪ್ರತಿ ಹಂತದಲ್ಲೂ ಸವಾಲುಗಳಿದ್ದವು. ಎಲ್ಲವನ್ನೂ ಇಬ್ಬರು ಮಹಿಳೆಯರು ಯಶಸ್ವಿಯಾಗಿ ಎದುರಿಸಿ ನಿಂತದ್ದು ಅಚ್ಚರಿಯ ಜೊತೆಗೆ ಹೆಮ್ಮೆಯನ್ನು ಮೂಡಿಸಿದೆ ಎನ್ನುವ ನಿವೃತ್ತ ನೇವಿ ಕಮಾಂಡರ್ ಅಭಿಲಾಷ್ ಟಾಮಿ, 'ಮಹಿಳೆಯರ ದಿಟ್ಟತನವನ್ನು ಎಷ್ಟು ಕೊಂಡಾಡಿದರೂ ಸಾಲದು' ಎನ್ನುತ್ತಾರೆ. ಸಾಗರಯಾನದ ಮೂಲಕ ಎರಡು ಬಾರಿ ವಿಶ್ವ ಪರ್ಯಟನೆ ಮಾಡಿದ ಕೀರ್ತಿ ಟಾಮಿ ಅವರದ್ದು.

## ಸಿಗಲಿದೆ ಮಹಾ ಅವಕಾಶ

ಮುಂಬರುವ 'ಸಾಗರ ಪರಿಕ್ರಮ–4' ಯಾತ್ರೆ ತುಂಬಾ ಭಿನ್ನವಾಗಿರಲಿದೆ. ಸುಮಾರು 40,000 ಕಿ.ಮೀ.ಗಳ (21600 ಸಾಗರ ಮೈಲಿಗಳ) ಪಯಣ ಇದಾಗಿರುತ್ತದೆ. ಕನಿಷ್ಠ 8ರಿಂದ 10 ತಿಂಗಳು ಸಮಯ ಹಿಡಿಯುವ ಈ ಯಾತ್ರೆಯಲ್ಲಿ ಏಕಾಂಗಿ ಮಹಿಳೆಯೊಬ್ಬರು ಇಡೀ ವಿಶ್ವವನ್ನೇ ಸುತ್ತಿ ಬರಬೇಕು. ಸಹಾಯಕ್ಕೆ ಇನ್ನೊಂದು ಜೀವ ನೌಕೆಯಲ್ಲಿರುವುದಿಲ್ಲ. ಕನಿಷ್ಠ ಒಂದು ವರ್ಷಕ್ಕೆ ಬೇಕಾಗುವ ಆಹಾರ, ನೀರು, ಸ್ಯಾಟಲೈಟ್ ಫೋನು, ಇಂಧನ, ನೌಕೆ ರಿಪೇರಿ ಸಾಧನಗಳು, ಆರೋಗ್ಯಕ್ಕೆ ಬೇಕಾದ ಔಷಧಿ, ತೊಡಲು ಬೇಕಾದ ವಸ್ತ್ರ, ಅಪಾಯದ ಸಂದರ್ಭಗಳನ್ನು ಎದುರಿಸಲು ಬೇಕಾದ ಅತ್ಯಗತ್ಯ ಸಾಮಾನುಗಳು, ಕತ್ತರಿ, ದಾರ, ಅಂಟು, ಟೇಪು, ಪಿನ್ನು, ದಬ್ಬಣ... ಹೀಗೆ ಯಾವ ವಸ್ತು ಯಾವಾಗ ಉಪಯೋಗಕ್ಕೆ ಬರುತ್ತದೆ ಎಂಬುದು ಗೊತ್ತಿರುವುದಿಲ್ಲ. ಆದ್ದರಿಂದ ಪ್ರತಿಯೊಂದನ್ನೂ ಪಯಣ ಪ್ರಾರಂಭಿಸುವುದಕ್ಕಿಂತ ಮುಂಚೆಯೇ ನೌಕೆಯಲ್ಲಿ ಸ್ಟಾಕ್ ಮಾಡಿ ಇಟ್ಟುಕೊಂಡಿರಬೇಕು. 9ರಿಂದ 10 ಮೀಟರ್ ಎತ್ತರದವರೆಗೂ ಚಿಮ್ಮುವ ಅಲೆಗಳನ್ನು ಎದುರಿಸಿ, ಸಾಗರದಲ್ಲಿ ಏಳುವ ಬಿರುಗಾಳಿ, ಚಂಡಮಾರುತಗಳನ್ನು ಮೆಟ್ಟಿನಿಂತು ನಿರಂತರವಾಗಿ ಪಯಣಿಸುತ್ತಿರಬೇಕು. ರೂಪ ಮತ್ತು ಡಿಲ್ನ ಇಬ್ಬರೂ ಈ ಪರಿಕ್ರಮಕ್ಕೆ ಸಮರ್ಥರಾಗಿದ್ದು, ಅಂತಿಮ ಹಂತದ ಸಂದರ್ಶನದಲ್ಲಿ ಯಾರು ಉತ್ತೀರ್ಣರಾಗುತ್ತಾರೋ



ಡಿಲ್ನ ಕೆ.

ಅವರು ಚಾರಿತ್ರಿಕ ಅವಕಾಶ ಪಡೆಯುವರು.

ಸಾಗರಗಳ ಎಲ್ಲೆಗಳನ್ನು ದಾಟಿ ಪಯಣಿಸುವುದು ಈ ಇಬ್ಬರು ಸಾಹಸಿಗಳಿಗೆ ಹೊಸತಲ್ಲ. 2023ರ ಇದೇ ದಿನಗಳಲ್ಲಿ ರೂಪ ಮತ್ತು ಡಿಲ್ನ ಇದೇ 'ತಾರಿಣಿ' ನೌಕೆಯಲ್ಲಿ 188 ದಿನಗಳ ಕಾಲ 17000 ಸಾಗರ ಮೈಲಿಗಳ ಪಯಣ ಮಾಡಿದ್ದರು; ರಿಯೋಡಿಜನೈರೋವರೆಗೆ ಪಯಣಿಸಿ ಹಿಂದಿರುಗಿದ್ದರು. 'ಇಂಡಿಯನ್ ನೇವಲ್ ಸೇಲಿಂಗ್ ಅಸೋಸಿಯೇಷನ್' (**INSA**) ನೇತೃತ್ವದಲ್ಲಿ ಆ ಸಾಗರಯಾನವನ್ನು ಸಂಘಟಿಸಲಾಗಿತ್ತು.

ಇದುವರೆಗೆ 8 ಜನ ಭಾರತೀಯರು ಸಾಗರಗಳ ಮೂಲಕ ವಿಶ್ವ ಪರ್ಯಟನೆ ಮಾಡಿದ್ದಾರೆ. ಅವರೆಲ್ಲರೂ ಪುರುಷರೇ. ಅವರಲ್ಲಿ ಕ್ಯಾಪ್ಟನ್ ದಿಲೀಪ್ ದೊಂಡೆ ಮತ್ತು ಕಮಾಂಡರ್ ಅಭಿಲಾಷ್ ಕ್ರಮವಾಗಿ 'ಸಾಗರ ಪರಿಕ್ರಮ–1'